ಬಸವ ಕಲ್ಯಾಣ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ

189 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೀದರ್ ಜಿಲ್ಲೆಯ ಬಸವ ಕಲ್ಯಾಣ ಪಟ್ಟಣವು 50 ಸಾವಿರದ ಜನಸಂಖ್ಯೆಯನ್ನು ಹೊಂದಿದ್ದು, ಐತಿಹಾಸಿಕ ಹಾಗೂ ವ್ಯಾಪಾರಿ ಕೇಂದ್ರವಾಗಿದ್ದು, ಸದರಿ ಪಟ್ಟಣದಲ್ಲಿ ಕುಡಿಯುವ ನೀರಿನ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಚುಳ್ಕಿ ನಾಲಾ ನೀರಾವರಿ ಯೋಜನೆಯಿಂದ ಬಸವಕಲ್ಯಾಣ ಪಟ್ಟಣಕ್ಕೆ ನೀರನ್ನು ಒದಗಿಸುವ ಯೋಜನೆಯೊಂದನ್ನು ರೂಪಿಸಿರುವುದು ನಿಜವೇ? ಹಾಗಿದ್ದಲ್ಲಿ ಇದಕ್ಕೆ ಎಷ್ಟು ಹಣ ತಗಲುವುದು. ಈಗಾಗಲೇ ಈ ಕಾರ್ಯಕ್ರಮಕ್ಕಾಗಿ ಎಷ್ಟು ವೆಚ್ಚ ಮಾಡಲಾಗಿದೆ ಮತ್ತು ಎಷ್ಟು ಪ್ರಯೋಜನವಾಗಿದೆ?*

ಇ) *ಹಿಂದಿನ ಅಧಿವೇಶನದಲ್ಲಿ, ಹಿಂದಿನ ನಗರಾಭಿವೃದ್ಧಿ ಸಚಿವರು ಬಸವ ಕಲ್ಯಾಣ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಕೂಡಲೇ ಕ್ರಮಕೈಗೊಳ್ಳುವುದಾಗಿ ಆಶ್ವಾಸನೆ ನೀಡಿರುವುದು ನಿಜವೇ? ಹಾಗಿದ್ದಲ್ಲಿ ಇದುವರೆಗೆ ಕಾರ್ಯಗತ ಗೊಳಿಸದಿರಲು ಕಾರಣವೇನು?*

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು

ಆ) ಹೌದು

ಈ ಯೋಜನೆಯ ಅಂದಾಜು, 1994-95ರ ದರ ಪಟ್ಟಿಯ ಮೇರೆಗೆ ಸುಮಾರು 658 ಲಕ್ಷ ರೂ.ಗಳು ಆಗುತ್ತದೆ. ಈ ಯೋಜನೆಗೆ ಸರ್ಕಾರದ ಆಜ್ಞೆ ಸಂಖ್ಯೆ ವನೀ 10 ಯುಡಬ್ಲ್ಯೂಎಸ್:94 ದಿ: 11-8-94ರಲ್ಲಿ ತಾತ್ವಿಕ, ಮಂಜೂರಾತಿಯನ್ನು ನೀಡಿದ್ದು, ಯೋಜನೆಯನ್ನು ಈವರೆವಿಗೂ ಕೈಗೆತ್ತಿ ಕೊಂಡಿರುವುದಿಲ್ಲ.

ಈ) ಉತ್ತರ (ಅ) ನಲ್ಲಿ ತಿಳಿಸಿರುವ ಹಾಗೆ ಸರ್ಕಾರದ ತಾತ್ವಿಕ ಮಂಜೂರಾತಿಯನ್ನು ನೀಡಿದೆ.

To be declare as drought affected district of Bidar

190 - Sri Basavaraj Patil Attur (Basavakalyna) : Will the Hon'ble Revenue Minister be pleased to state?

a) Whether it has come to the notice of the Government that ther is no rainfall in Bidar district and as a result there is no sowing?

b) Furnish the details of rainfall & Khariff sowing during the year and last year.

c) What steps have been taken by the Government in non-sown areas of the Taluks? wat steps have been taken for remission of land revenue?

d) Steps taken for drinking water supply and opening of Fodder Bank?

Sri. Dharma Singh (Hon'ble Minister for Revenue) :

a) Yes. Action has been taken to create employment and to provide drinking water in the affected taluks.

b) Details of rainfall in Bidar district for last year and current year.

Sl. No. Taluk	Rainfall during last year	Rainfall during the current year
1. Howrad	463.2	239.6
2. Basavakalyan	328.5	308.0
3. Bhalki	483.9	336.6
4. Bidar	464.6	343.5
5. Humnabad	379.2	247.4

The details of Khariff sowing in Bidar District is given below :

Sl. No.	Taluk	Khariff sown in last year	Khariff sown in current year
1.	Howrad	80781	68930
2.	Basavakalyan	63024	64247
3.	Bhalki	57240	83553
4.	Bidar	24777	43725
5.	Humnabad	48412	39860
	Total	274234	300315

c) A Contingency action plan for Rs. 529.00 lakhs has been prepared for employment generation, drinking water supply and supply of fodder etc. The State Govt. has already released a sum of Rs. 70.00 lakhs to the district for drinking water supply from 1.4.94 to 12.8.94.

d) YES

ರಾಜ್ಯದಲ್ಲಿ ಪ್ರವಾಹದಿಂದ ಮೃತಪಟ್ಟವರ ಸಂಖ್ಯೆ

186 - ಶ್ರೀ ಬಸವರಾಜಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಪ್ರವಾಹದಿಂದ ರಾಜ್ಯದಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು?

ಆ) ಇದುವರೆಗೂ ಸರ್ಕಾರ ನೀಡಿರುವ ಪರಿಹಾರವೆಷ್ಟು?

ಇ) ಮನೆ ಮತ್ತು ಬೆಳೆಗಳನ್ನು ಕಳೆದುಕೊಂಡವರ ಸಂಖ್ಯೆ ಎಷ್ಟು?

ಈ) ಮನೆಗಳ ನಿರ್ಮಾಣ ಅಥವಾ ದುರಸ್ಥಿಗಾಗಿ ಬಿಡುಗಡೆ ಮಾಡಿರುವ ಮೊತ್ತವೆಷ್ಟು?

ಉ) ಬೆಳೆ ಹಾನಿಗೆ ನೀಡಿರುವ ಪರಿಹಾರವೆಷ್ಟು?

ಊ) ನೆರೆ ಹಾವಳಿ ಪರಿಹಾರ ಕಾರ್ಯಗಳಿಗೆ ಇದುವರೆಗೂ ಸರ್ಕಾರ ಖರ್ಚು ಮಾಡಿರುವ ಮೊತ್ತವೆಷ್ಟು?